ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದಂ.ನ್ಯಾದಂ.ರವರ ನ್ಯಾಯಾಲಯ, ತಿಪಟೂರು.

# ಸಿ.ಸಿ.ನಂ.352/2024

ಪಿರ್ಯಾದುದಾರರು: ತಿಪಟೂರು ನಗರ ಪೊಲೀಸ್ ಠಾಣಾ ಆರಕ್ಷಕರು,
ತಿಪಟೂರು

ವಿರುದ್ಧ

ಆರೋಪಿ : ಪ್ರಭ ಬಿನ್ ಚಂದ್ರಯ್ಯ, 46 ವರ್ಷ,
ವಾಸಃಕೆ.ಹೆಚ್.ಬಿ. ಕಾಲೋನಿ,
2 ನೇ ಮುಖ್ಯ , ತಿಪಟೂರು ಟೌನ್.

## ದೋಷಾರೋಪಣೆ

ಶ್ರೀ.ಮಹಮ್ಮದ್ ಆರಿಪುಲ್ಲ.ಸಿ.ಎಫ್., ಬಿ.ಎಸ್ಸಿ, ಎಲ್.ಎಲ್.ಬಿ., ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದಂ.ನ್ಯಾದಂ., ತಿಪಟೂರು ಆದ ನಾನು ಮೇಲ್ಕಂಡ ಆರೋಪಿಯಾದ ನಿಮ್ಮ ವಿರುದ್ಧ ಮಾಡುತ್ತಿರುವ ದೋಷಾರೋಪಣಾ ಸಾರಾಂಶವೇನೆಂದರೆ:

ದಿನಾಂಕ : 23.01.2024 ರಂದು ರಾತ್ರಿ 09.40 ಗಂಟೆಯಲ್ಲಿ ತಿಪಟೂರು ನಗರ ಪೊಲೀಸ್ ಠಾಣಾ ಸರಹದ್ದು ತಿಪಟೂರು ಟೌನ್ ನ ಕೆ.ಹೆಚ್.ಬಿ. ಕಾಲೋನಿಯ ಎನ್.ಆರ್.ಕ್ಲಿನಿಕ್ಕಿನ Reception Hall ಗೆ ಆರೋಪಿಯಾದ ನೀವು ಏಕಾಏಕಿ ನುಗ್ಗಿ ಸಾಕ್ಷಿ-01 ರವರು ವೈದ್ಯರಾಗಿದ್ದು ಅವರು ರೋಗಿಗಳಿಗೆ ಚಿಕಿತ್ಸೆ ನೀಡುತ್ತಿರುವುದನ್ನು ತಡೆದು, ರೋಗಿಗಳನ್ನು ನೋಡಲು ಗಂಟೆಗಟ್ಟಲೆ ಮಾಡುತ್ತೀಯಾ ಎಂದು ಅತಿಕ್ರಮಣ ಪ್ರವೇಶ ಮಾಡಿದ್ದು, ಸದರಿ ನಿಮ್ಮ ಕೃತ್ಯವು ಭಾರತೀಯ ದಂಡ ಸಂಹಿತೆ ಕಲಂ. **448** ಮತ್ತು ಕಲಂಃ**4 of The Karnataka Prohibition of Violence Against Medicare Personal and Damage to Property in Medicare Service Institutions** ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವಾಗಿರುತ್ತದೆ.

2. ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿ ನೀವು ಏಕೋದ್ದೇಶದಿಂದ ಮುಂದುವರೆದು ಸಾಕ್ಷಿ-01 ರವರಿಗೆ ಬೇಗ ಚಿಕಿತ್ಸೆ ನೀಡಲೇ ಸೂಳೆ ಮಗನೆ, ಬೋಳಿ ಮಗನೆ, ಬೋಳಿ ಮಗನೆ ಎಂದು ಅವಾಚ್ಯ ಶಬ್ದದಿಂದ ಬೈದಿದ್ದು, ಸದರಿ ನಿಮ್ಮ ಕೃತ್ಯವು ಭಾರತೀಯ ದಂಡ ಸಂಹಿತೆ ಕಲಂ. **504** ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವಾಗಿರುತ್ತದೆ.

3. ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀವು ಏಕೋದ್ದೇಶದಿಂದ ಮುಂದುವರೆದು, ಸಾಕ್ಷಿ-01 ರವರಿಗೆ ಹೀಗೆ ಮಾಡಿದರೆ ನಿನ್ನನ್ನು ಮುಗಿಸಿಬಿಡುತ್ತೇನೆಂದು ಕೊಲೆ ಬೆದರಿಕೆ ಹಾಕಿದ್ದು, ಸದರಿ ನಿಮ್ಮ ಕೃತ್ಯವು ಭಾರತೀಯ ದಂಡ ಸಂಹಿತೆ ಕಲಂ.**506** ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವಾಗಿರುತ್ತದೆ ಎಂದು ನಿಮ್ಮ ಮೇಲೆ ಆರೋಪಿಸಲಾಗಿದೆ.

4. ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀವು ಏಕೋದ್ದೇಶದಿಂದ ಮುಂದುವರೆದು ಸಾಕ್ಷಿ-01 ರವರಿಗೆ ರಿಸೆಷನ್ ಹಾಲಿನಿಂದ ಹೋಗದಂತೆ ಅಡ್ಡಗಟ್ಟಿದ್ದು, ಸದರಿ ನಿಮ್ಮ ಕೃತ್ಯವು ಭಾರತೀಯ ದಂಡ ಸಂಹಿತೆ ಕಲಂ. **341** ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವಾಗಿರುತ್ತದೆ.

ಮೇಲ್ಕಂಡ ಅಪರಾಧಗಳನ್ನು ಆರೋಪಿಯಾದ ನೀವು ಈ ನ್ಯಾಯಾಲಯದ ವಿಚಾರಣಾ ಅಧಿಕಾರ ವ್ಯಾಪ್ತಿಯಲ್ಲಿ ಮಾಡಿರುವುದರಿಂದ ಸದರಿ ಆರೋಪಕ್ಕೆ ನನ್ನ ಮುಂದೆ ವಿಚಾರಣೆಗೆ ಒಳಪಡಬೇಕೆಂದು ಈ ಮೂಲಕ ನಿರ್ದೇಶಿಸುತ್ತಿದ್ದೇನೆ.

(ಮಹಮ್ಮದ್ ಆರಿಫುಲ್ಲ.ಸಿ.ಎಫ್.,)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದಂ.ನ್ಯಾದಂ.,
ತಿಪಟೂರು

**ಸಿ.ಸಿ.352/24**

ತಿಪಟೂರು ನಗರ ಪೊಲೀಸ್ ಠಾಣೆ ಆರೋಪಿ

ಪ್ರಭ

<u>ದಂಡ ಪ್ರಕ್ರಿಯಾ ಸಂಹಿತೆ ಕಲಂ. **240(2)** ಅಡಿಯಲ್ಲಿ ಆರೋಪಿಯ ಹೇಳಿಕೆ</u>

ಪ್ರಶ್ನೆ:1) ಇದೀಗ ಓದಿ ಹೇಳಿದ ಆರೋಪಣಾ ಸಾರಾಂಶವು ನಿಮಗೆ ಅರ್ಥವಾಯಿತೇ?
ಉತ್ತರ:-

ಪ್ರಶ್ನೆ:2) ನೀವು ತಪ್ಪನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗಬೇಕೇ?
ಉತ್ತರ:-

(ದಿನಾಂಕ: 0**8.07.2025** ರಂದು ತೆರೆದ ನ್ಯಾಯಾಲಯದಲ್ಲಿ ದೋಷಾರೋಪಣೆಯನ್ನು ಆರೋಪಿಗೆ ಓದಿ ಹೇಳಿದ್ದು, ಮೇಲಿನ ಪ್ರಶ್ನೆಗಳಿಗೆ ಅವರು ನೀಡಿದ ಉತ್ತರಗಳನ್ನು ಪಡೆದು ಯಥಾವತ್ತಾಗಿ ನನ್ನಿಂದ ದಾಖಲು ಮಾಡಿಕೊಳ್ಳಲಾಯಿತು)

(ಮಹಮ್ಮದ್ ಆರಿಫುಲ್ಲ.ಸಿ,ಎಫ್)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದಂ.ನ್ಯಾದಂ.,
ತಿಪಟೂರು